ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ:ನಂ.ನೃನಾ.ಅ1.ದಕ್ಷಿಣ.ವಲಯ.ರಾಜ್ಯಗಳ ವಿಜ್ಞಾನ ಮೇಳ[SISF]/2018-19 ದಿನಾಂಕ:28-09-2018

ಉಪನಿರ್ದೇಶಕರು [ಆಡಳಿತ]
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು ಉತ್ತರ ಜಿಲ್ಲೆ
ಕೆಂಪೇಗೌಡ ರಸ್ತೆ, ಬೆಂಗಳೂರು

ವಿಷಯ: 2018-19ನೇ ಸಾಲಿನಲ್ಲಿ ದಕ್ಷಿಣ ವಲಯ ರಾಜ್ಯಗಳ ವಿಜ್ಞಾನ ಮೇಳ [SISF] ವನ್ನು ಕರ್ನಾಟಕ ರಾಜ್ಯದ ವತಿಯಿಂದ ಆಯೋಜಿಸುವ ಬಗ್ಗೆ.

ಉಲ್ಲೇಖ: 1.ನಿರ್ದೇಶಕರು, ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ ಕಸ್ತೂರಿಬಾ ರಸ್ತೆ, ಬೆಂಗಳೂರು-1 ರವರ ಪತ್ರ ಸಂಖ್ಯೆ:VM 24(18) EDEXT/ SISF/2019 /498 dated: 06-06-2018

2.ಸರ್ಕಾರಿ ಆದೇಶ ಸಂಖ್ಯೆ:ಇಡಿ.115.ಯೋಯೋಕ.2018 ದಿನಾಂಕ:10-08-2018

-&&&-

ಮೇಲ್ಕಂಡ ವಿಷಯ ಮತ್ತು ಉಲ್ಲೇಖದಂತೆ 2018-19ನೇ ಸಾಲಿನ ದಕ್ಷಿಣ ವಲಯ ರಾಜ್ಯಗಳ ವಿಜ್ಞಾನ ಮೇಳ [SISF] ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸರ್ಕಾರದ ವತಿಯಿಂದ ನಡೆಸಲಾಗುತ್ತಿದ್ದು, ಈ ಕಾರ್ಯಕ್ರಮವನ್ನು 2019ರ ಜನವರಿ ಮೊದಲನೇ ಅಥವಾ ಮೂರನೇ ವಾರ ಬೆಂಗಳೂರು ನಗರದಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಈ ಕಾರ್ಯಕ್ರಮ ಆಯೋಜನೆಗೆ ರೂ.43.50 [ನಲವತ್ತಮೂರು ಲಕ್ಷದ ಐವತ್ತು ಸಾವಿರ] ಮೊತ್ತದ ಅನುದಾನ ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ.

ದಕ್ಷಿಣ ವಲಯ ರಾಜ್ಯಗಳ ವಿಜ್ಞಾನ ಮೇಳ [SISF] ಕಾರ್ಯಕ್ರಮವನ್ನು ನಿಮ್ಮ ಜಿಲ್ಲೆಯ ವತಿಯಿಂದ ಆಯೋಜಿಸಲು ತಿಳಿಸಿದೆ. ಸದರಿ ವಿಜ್ಞಾನ ಮೇಳವನ್ನು ಅಚ್ಚುಕಟ್ಟಾಗಿ, ಯಾವುದೇ ಕುಂದು ಕೊರತೆ, ದೂರುಗಳಿಗೆ ಅವಕಾಶವಿಲ್ಲದಂತೆ ನಡೆಸುವುದು. SISF 2018-19ರ ಆಯೋಜನೆಗೆ ಸಂಬಂಧಿಸಿದಂತೆ ವೆಚ್ಚದ ಅಂದಾಜು ಪಟ್ಟಿ ಈ ಪತ್ರದೊಂದಿಗೆ ಲಗತ್ತಿಸಿದ್ದು, ಅನುದಾನ ಮೊತ್ತ ರೂ.43.50 ಲಕ್ಷಗಳನ್ನು ನಿಮ್ಮ ಖಾತೆಗೆ ಅಪ್‌ಲೋಡ್ ಮಾಡಲಾಗುವುದು. ನಂತರ ಬಿಡುಗಡೆಯಾದ ಹಣವನ್ನು KTTP ನಿಯಮ 2000 ರಂತೆ ಖರ್ಚು ಮಾಡಲು ಕ್ರಮ ವಹಿಸುವುದು. ಕಾರ್ಯಕ್ರಮ ಮುಗಿದ ಕೂಡಲೇ ಖರ್ಚು ವೆಚ್ಚದ ಮಾಹಿತಿಯೊಂದಿಗೆ ಉಪಯೋಗತಾ ಪ್ರಮಾಣ ಪತ್ರವನ್ನು ಈ ಕಛೇರಿಗೆ ಸಲ್ಲಿಸುವುದು.

ದಕ್ಷಿಣ ವಲಯ ರಾಜ್ಯಗಳ ವಿಜ್ಞಾನ ಮೇಳ [SISF] ನಡೆಯುವ ಅವಧಿ – 05 ದಿನಗಳು

ಭಾಗವಹಿಸುವ ಅಂದಾಜು ಸ್ಪರ್ಧಾರ್ಥಿಗಳು : 1] ವಿದ್ಯಾರ್ಥಿಗಳು – 350 ಮಂದಿ
2] ಶಿಕ್ಷಕರು – 300 ಮಂದಿ
3] ಇತರೆ ಅಧಿಕಾರಿ – 150 ಮಂದಿ

ಈ ಕಾರ್ಯಕ್ರಮದಲ್ಲಿ ಶೇ.50% ವಿದ್ಯಾರ್ಥಿನಿಯರು ಮತ್ತು ಮಹಿಳಾ ಶಿಕ್ಷಕಿಯರು ಭಾಗವಹಿಸುತ್ತಾರೆ. ವಸ್ತು ಪ್ರದರ್ಶನ ಮಳಿಗೆ, ಶಾಮಿಯಾನ, ಪೀಠೋಪಕರಣಗಳ ವ್ಯವಸ್ಥೆ, ಡೆಕೋರೇಷನ್ ವ್ಯವಸ್ಥೆ, ವಿದ್ಯುತ್ ಸೌಲಭ್ಯ, ಕುಡಿಯುವ ನೀರಿನ ಸೌಲಭ್ಯ, ಧ್ವನಿವರ್ಧಕ, ಜನರೇಟರ್ ವ್ಯವಸ್ಥೆ, ವಿದ್ಯಾರ್ಥಿ ಹಾಗೂ ಶಿಕ್ಷಕರುಗಳು ಸ್ಪರ್ಧೆ ಪ್ರಾರಂಭವಾಗುವ ಹಿಂದಿನ ದಿನ ಹಾಜರಾಗುವ ದಿನ ಹಾಗೂ ಸ್ಪರ್ಧೆ ನಡೆಯುವ 05 ದಿನ ಒಟ್ಟು 06 ದಿವಸಗಳು ಸ್ಪರ್ಧಾರ್ಥಿಗಳಿಗೆ ವಸತಿ ಮತ್ತು ಊಟದ ವ್ಯವಸ್ಥೆ, ಕಾರ್ಯಕ್ರಮ ಆಯೋಜನಾ ಸ್ಥಳಕ್ಕೆ – ರೈಲು / ಬಸ್ ನಿಲ್ದಾಣದಿಂದ ಸ್ಪರ್ಧಾರ್ಥಿಗಳು ಬರಲು ಸಾರಿಗೆ ವ್ಯವಸ್ಥೆ, ಕುಡಿಯುವ ನೀರು ಮತ್ತು ಶೌಚಾಲಯ ವ್ಯವಸ್ಥೆ, ವಿದ್ಯಾರ್ಥಿಗಳ ಸುರಕ್ಷತೆಗಾಗಿ ಭದ್ರತಾ ವ್ಯವಸ್ಥೆ, ತುರ್ತು ವೈದ್ಯಕೀಯ ಸೌಲಭ್ಯ, ಪ್ರಚಾರಕ್ಕಾಗಿ ಬ್ಯಾನರ್ಸ್, ಪೋಸ್ಟರ್ಸ್, ಫೋಟೋ, ವಿಡಿಯೋ ಸೌಲಭ್ಯ, ಧ್ವನಿಮುದ್ರಣದ ವ್ಯವಸ್ಥೆ, ಆಮಂತ್ರಣ ಪತ್ರಿಕೆ, ಪಾರಿತೋಷಕ ಇತರೆ ಮೂಲಭೂತ ಸೌಕರ್ಯಗಳನ್ನೊಳಗೊಂಡಂತೆ, ಆಹ್ವಾನಿತರಿಗೆ / ವಿಶೇಷ ಆಹ್ವಾನಿತರಿಗೆ ವಿಶೇಷ ವಸತಿ ಒದಗಿಸತಕ್ಕದ್ದು.

ಸದರಿ ವಿಜ್ಞಾನ ಮೇಳದಲ್ಲಿ ಕರ್ನಾಟಕ ರಾಜ್ಯ ಮಾತ್ರವಲ್ಲದೆ ತಮಿಳುನಾಡು, ಪುದುಚೇರಿ, ಕೇರಳ, ತೆಲಂಗಾಣ, ಆಂಧ್ರಪ್ರದೇಶ ರಾಜ್ಯಗಳಿಂದ ಸ್ಪರ್ಧಾರ್ಥಿಗಳು ಭಾಗವಹಿಸುವುದರಿಂದ ಪ್ರೋಟೋಕಾಲ್‌ನಂತೆ ಕಾರ್ಯಕ್ರಮ ಆಯೋಜನೆಯನ್ನು ಶಿಸ್ತು ಕ್ರಮಬದ್ಧತೆಯೊಂದಿಗೆ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಲು ಸೂಚಿಸಿದೆ.

ದಕ್ಷಿಣ ವಲಯ ರಾಜ್ಯಗಳ ವಿಜ್ಞಾನ ಮೇಳ [SISF] ಆಯೋಜನೆ ಕುರಿತಂತೆ ಹೆಚ್ಚಿನ ಮಾಹಿತಿ ಮತ್ತು ಸಹಕಾರಕ್ಕಾಗಿ ನಿರ್ದೇಶಕರು, ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ, ಕಸ್ತೂರಿಬಾ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5216, ಬೆಂಗಳೂರು–560 001, ದೂರವಾಣಿ ಸಂಖ್ಯೆ: 22866200 / ಇ–ಮೈಲ್ ವಿಳಾಸ: vitmuseum@gmail.com website: www.vismuseum.gov.in ಸಂಪರ್ಕಿಸುವುದು.

Kulasekh
ನಿರ್ದೇಶಕರು [ಪ್ರೌಢ ಶಿಕ್ಷಣ]

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಮಾಹಿತಿಗಾಗಿ
2. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ಹಾಗೂ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು.
3. ನಿರ್ದೇಶಕರು, ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ, ಕಸ್ತೂರಿಬಾ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5216, ಬೆಂಗಳೂರು–560 001,
4. ನಿರ್ದೇಶಕರು, ಪ್ರಾಥಮಿಕ / ಪ್ರೌಢ / ಭಾಷಾ ಅಲ್ಪಸಂಖ್ಯಾತ, ಡಿ.ಎಸ್.ಇ.ಆರ್.ಟಿ, ಬೆಂಗಳೂರು
5. ಸಹನಿರ್ದೇಶಕರು, ಬೆಂಗಳೂರು, ಮೈಸೂರು, ಬೆಳಗಾಂ ಮತ್ತು ಧಾರವಾಡ ವಿಭಾಗ,
6. ರಾಜ್ಯದ ಎಲ್ಲಾ ಉಪನಿರ್ದೇಶಕರು [ಆಡಳಿತ] [ಅಭಿವೃದ್ಧಿ] ರವರ ಮಾಹಿತಿ ಹಾಗೂ ಕ್ರಮಕ್ಕಾಗಿ
7. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ
8. ಕಛೇರಿ ಪ್ರತಿ

d:\music\music\dd-north-sisf-2018-19.doc